

# ಅನುವಾದ ಸಂವಾದ

ಬೇರೆ ಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಬೇರೆ ಭಾಷೆಗಳಿಗೆ ಅನುವಾದಗಳು ನಿರಂತರವಾಗಿ ಆಗುತ್ತ ಬಂದಿವೆ. ತಮಿಳು, ತೆಲುಗು, ಹಿಂದಿ, ಮಲಯಾಳಂ, ಬಂಗಾಳಿಯಂತಹ ಭಾರತೀಯ ಭಾಷೆಗಳು ಮಾತ್ರವಲ್ಲ ಅನೇಕ ವಿದೇಶಿ ಭಾಷೆಗಳಿಂದಲೂ ಕನ್ನಡಕ್ಕೆ ಅನುವಾದಗಳು ಆಗುತ್ತಿರುತ್ತವೆ. ಹಾಗೆಯೇ ಆ ಭಾಷೆಗಳಿಗೂ ಕನ್ನಡ ಕೃತಿಗಳ ಅನುವಾದ ಆಗುತ್ತಿರುತ್ತದೆ. ಇವುಗಳ ಹೊರತಾಗಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಆಗುವ ಅನುವಾದ ಹೆಚ್ಚಿನ ಪ್ರಮಾಣದಲ್ಲಿದೆ. ಇಂಗ್ಲಿಷ್ ಭಾಷೆಗೂ ಕನ್ನಡದ ಕೃತಿಗಳ ಭಾಷಾಂತರದ ಪ್ರಮಾಣ ಹೆಚ್ಚಿದೆ. ಬಹುಕಾಲದಿಂದ ಅನುವಾದ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಬಂದ ಅನುವಾದಕರಿಗೆ ಭಾಷಾಂತರದ ಒಳ ಹೊರಗನ್ನು ಮತ್ತು ಅದರ ವರ್ತಮಾನವನ್ನು ಅರಿಯುವ ದಿಸೆಯಲ್ಲಿ ಕೆಲವು ಪ್ರಶ್ನೆಗಳನ್ನು ‘ಮಯೂರ’ ಮುಂದಿಟ್ಟಿತ್ತು. ಅವುಗಳಿಗೆ ಅನುವಾದಕರು ಕೊಟ್ಟ ಪ್ರತಿಕ್ರಿಯೆಗಳನ್ನು ಇಲ್ಲಿ ಕೊಡಲಾಗಿದೆ.